ಕಥೆ



ಮೂಲ: **ಪ್ರೇಮ್‌ಚಂದ್**

ಕನ್ನಡಕ್ಕೆ: **ಸೊಂದಲಗೆರೆ ಲಕ್ಷ್ಮೀಪತಿ**

ಕಲೆ: ವೆಂಕಟ್ರಮಣ ಭಟ್



# ಬ್ರಹ್ಮನ ಪ್ರಹಸನ



**ಪತ್ನಿ**

ನಿಜಕ್ಕೂ ನಾನೋರ್ವ ದೌರ್ಭಾಗ್ಯದ ಹೆಣ್ಣು. ಇಲ್ಲ ಅಂದ್ರೆ ಸದಾಕಾಲ ಅಸಹ್ಯ ಹುಟ್ಟಿಸುವಂತಹ ದೃಶ್ಯಗಳಿಗೆ ನಾನೇಕೆ ಸಾಕ್ಷಿಯಾಗಬೇಕಿತ್ತು? ಈ ಅನಿಷ್ಟಗಳನ್ನೆಲ್ಲ ನೋಡಿ, ನೋಡಿ, ನನಗೂ ಸಾಕಾಗಿಹೋಗಿದೆ. ದುರದೃಷ್ಟವಶಾತ್, ಅವೇ ಈಗ ನನ್ನ ಬಾಳ್ವೆಯಲ್ಲಿ ಹಾಸುಹೊಕ್ಕಾಗಿವೆ. ನಾನೋರ್ವ ಶ್ರೇಷ್ಠ ಕುಲೀನ ಬ್ರಾಹ್ಮಣನ ಮಗಳು. ನನ್ನ ತಂದೆ ಪ್ರಮುಖ ಹಾಗೂ ಗಹನವಾದ ಸಿದ್ಧಾಂತಗಳ ಮೇಲೆ ತೆಗೆದುಕೊಳ್ಳುವ ತೀರ್ಪು ಪರಮ ಪವಿತ್ರದ್ದೆಂದು ಜನಜನಿತವಾಗಿದೆ. ಅವರು ಮನೆಯಲ್ಲಿ ಸ್ನಾನ ಸಂಧ್ಯಾವಂದನೆ ಮಾಡದೆ ಒಂದೇ ಒಂದು ಹನಿ ನೀರು ಬಾಯಿಗೆ ಸೋಕಿಸಿದ್ದು ನನಗೆ ನೆನಪಿಲ್ಲ. ಒಮ್ಮೆ, ನನಗೆ ವಿಪರೀತ ಜ್ವರ ಬಂದ ಕಾರಣ ಸ್ನಾನ, ದೇವರ ಪೂಜೆ ಮಾಡದೆ ಔಷಧಿ ಸೇವನೆ ಮಾಡಬೇಕಾದ ಅನಿವಾರ್ಯ ಸ್ಥಿತಿ ನನಗಾಯಿತು. ಈ ಅವಘಡಕ್ಕೆ ತಿಂಗಳುಗಟ್ಟಲೆ ನಾನು ವ್ಯಥೆಪಟ್ಟೆ. ದೋಬಿ ನಮ್ಮ ಮನೆಯೊಳಗೆ ಕಾಲಿಡುತ್ತಿರಲಿಲ್ಲ. ವರಾಂಡದೊಳಗೆ